ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕ 1992

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 6)

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ 1978 (1979ರ ಕರ್ನಾಟಕ ಅಧಿನಿಯಮ 2)ನ್ನು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

1. ಚಿಕ್ಕ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು.

2. 5ನೇ ಪ್ರಕರಣದ ತಿದ್ದುಪಡಿ .- ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 (1979ರ ಕರ್ನಾಟಕ ಅಧಿನಿಯಮ 2) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ)ರ.

(i) (1)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕುದು. ಎಂದರೆ :-

"(1ಎ) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಚಾರಣೆಯ ತರುವಾಯ, ಮಂಜೂರಾದ ಯಾವುದೇ ಭೂಮಿಯ ವರ್ಗಾವಣೆಯು ಅಕೃತ ಮತ್ತು ಶೂನ್ಯವಲ್ಲವೆಂದು ಅಸಿಸ್ಟೆಂಟ್ ಕಮಿಷನರಿಗೆ ಮನದಟ್ಟಾದರೆ, ಅವರು, ತದನುಸಾರವಾಗಿ ಆದೇಶವನ್ನು ಹೊರಡಿಸಬಹುದು.

(ii) (2)ನೇ ಉಪ-ಪ್ರಕರಣದಲ್ಲಿ "(1)ನೇ ಉಪ-ಪ್ರಕರಣದಲ್ಲಿ ಎಂಬ ಪದಗಳು, ಆವರಣಗಳು ಮತ್ತು ಅಂಕಿಗೆ. "(1) ಮತ್ತು (1ಎ) ಉಪ-ಪ್ರಕರಣಗಳಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಸ್ಥಾಪಿಸತಕ್ಕದು.

3. 5ಎ ಪ್ರಕರಣದ ತಿದ್ದುಪಡಿ :- ಮೂಲ ಅಧಿನಿಯಮದ 5ಎ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದು, ಎಂದರೆ :-

"(1ಎ) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ಅಧಿನಿಯಮ, 1992ರ ಪ್ರಾರಂಭದ ತರುವಾಯ, ಅಸಿಸ್ಟೆಂಟ್ ಕಮಿಷನರು, 5ನೇ ಪ್ರಕರಣದ (1ಎ) ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಆದೇಶವು ತನಗೆ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಅಧಿಕಾರ ವ್ಯಾಪ್ತಿಯುಳ್ಳ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಬಹುದು.

ಪರಂತು, ಡೆಪ್ಯುಟಿ ಕಮಿಷನರು, (1ಎ) ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯ ತರುವಾಯ, ಅಂಥ ಆದೇಶದ ವಿರುದ್ಧ ಹೂಡಲಾದ ಅಪೀಲನ್ನು, ಆ ಅವಧಿಯೊಳಗೆ ಅಪೀಲನ್ನು ಹೂಡದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ತನಗೆ ಮನದಟ್ಟಾದರೆ, ಅದನ್ನು ಅಂಗೀಕರಿಸಬಹುದು :

ಮತ್ತು ಪರಂತು, ಡೆಪ್ಯುಟಿ ಕಮಿಷನರು ಅಂಥ ಪ್ರಾರಂಭದ ದಿನಾಂಕಕ್ಕೆ ಮುಂಚೆ ಮಂಜೂರಾದ ಯಾವುದೇ ಭೂಮಿಯ ವರ್ಗಾವಣೆಯನ್ನು ಅಕೃತ ಮತ್ತು ಶೂನ್ಯವಲ್ಲವೆಂದು ತೀರ್ಮಾನಿಸುವ ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದ ವಿರುದ್ಧದ ಅಪೀಲನ್ನು ಸದರಿ ದಿನಾಂಕದಂದು, ಅಂಥ ಆದೇಶದ ವಿರುದ್ಧ ಹೂಡಲಾದ ರಿಟ್ ಅರ್ಜಿ ಅಥವಾ ಅಂಥ ರಿಟ್ ಅರ್ಜಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಹೂಡಲಾದ ಅಪೀಲು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇದ್ದರೆ, ಅಂಗೀಕರಿಸಬಹುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978, 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಸಿಸ್ಟೆಂಟ್ ಕಮಿಷನರು, ವರ್ಗಾವಣೆಯು ಅಕೃತ ಮತ್ತು ಶೂನ್ಯವಲ್ಲವೆಂದು ಅಭಿಪ್ರಾಯಪಟ್ಟರೆ, ಮಂಜೂರಾದ ಭೂಮಿಯ ಮಂಜೂರಾತಿಯನ್ನು ಪಡೆದವನು, ಅಸಿಸ್ಟೆಂಟ್ ಕಮಿಷನರ್ ಆದೇಶದ ವಿರುದ್ಧ ಡೆಪ್ಯೂಟಿ ಕಮಿಷನರಿಗೆ ಅಪೀಲು ಹೂಡಲು ಉಪಬಂಧ ಕಲ್ಪಿಸುವುದಿಲ್ಲ.

ಹಾಗೆ ಮಂಜೂರಾತಿ ಪಡೆದವನಿಗೆ ಉಂಟಾಗುವ ತೊಂದರೆಯನ್ನು ನಿವಾರಿಸುವ ಮತ್ತು ವೆಚ್ಚದ ಹೊರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಅಸಿಸ್ಟೆಂಟ್ ಕಮಿಷನರು ಮಾಡಿದ ಅಂಥ ಆದೇಶದ ವಿರುದ್ಧ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಲು ಉಪಬಂಧ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ವಿಧೇಯಕ

ಮಲ್ಲಿಕಾರ್ಜುನ ಎಂ. ಖರ್ಗೆ
ಕೇಂದ್ರಾಯ ಮತ್ತು ಗ್ರಾಮಾಣಾಭಿವೃದ್ಧಿ
ಮತ್ತು ಪಂಚಾಯತ್‌ರಾಜ್ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ.

L.A.-Vol. 4

10

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತುತ ಪ್ರಸ್ತಾವಿಕ ತಿದ್ದುಪಡಿಯಿಂದಾಗಿ ಸರ್ಕಾರಕ್ಕೆ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಅನುಬಂಧ

(ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978, (1979ರ ಕರ್ನಾಟಕ ಅಧಿನಿಯಮ 2)ರ ಉದ್ಧೃತ ಭಾಗ

* * *

5. ನೀಡಿದ ಭೂಮಿಗಳನ್ನು ಪುನರ್ವಶ ಮಾಡಿಕೊಳ್ಳುವುದು ಮತ್ತು ಹಕ್ಕುಳ್ಳವನಿಗೆ ವಾಪಸ್ಸು ಮಾಡುವುದು :- (1) ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯಿಂದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅಥವಾ ಯಾವೊಬ್ಬ ವ್ಯಕ್ತಿಯು ಲಿಖಿತದಲ್ಲಿ ಕೊಟ್ಟ ಮಾಹಿತಿಯ ಮೇಲೆ ಅಥಾ ತಾವಾಗಿಯೇ ಮತ್ತು ತಾವು ಉಚಿತವೆಂದು ಭಾವಿಸುವ ಅಂಥ ವಿಚಾರಣೆಯ ತರುವಾಯ ನೀಡಲಾದ ಯಾವುದೇ ಭೂಮಿಯ ವರ್ಗಾವಣೆಯು 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಕೃತ ಮತ್ತು ಶೂನ್ಯವೆಂದು ಅಸಿಸ್ಟೆಂಟ್ ಕಮಿಷನರಿಗೆ ಮನದಟ್ಟಾದಲ್ಲಿ, ಅವರು,-

(ಎ) ಅದರ ಸ್ವಾಧೀನತೆಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಒಕ್ಕಲೆಬ್ಬಿಸಿದ ತರುವಾಯ, ಆದೇಶದ ಮೂಲಕ, ಅಂಥ ಭೂಮಿಯ ಸ್ವಾಧೀನತೆಯನ್ನು ತೆಗೆದುಕೊಳ್ಳಬಹುದು.

ಪರಂತು, ಬಾಧಿತ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಯಥೋಚಿತ ಅವಕಾಶವನ್ನು ಕೊಟ್ಟ ಹೊರತು ಯಾವುದೇ ಅಂಥ ಆದೇಶವನ್ನು ಹೊರಡಿಸತಕ್ಕುದಲ್ಲ.

(ಬಿ) ಅಂಥ ಭೂಮಿಯು ಮೊದಲು ಮಂಜೂರಾದವನಿಗೆ ಅಥವಾ ಅವನ ಕಾನೂನು ಸಮ್ಮತ ವಾರಸುದಾರನಿಗೆ ಅದನ್ನು ವಾಪಸು ಕೊಡಬಹುದು. ಹಾಗೆ ಮಂಜೂರಾದವನಿಗೆ ಅಥವಾ ಕಾನೂನು ಸಮ್ಮತ ವಾರಸುದಾರನಿಗೆ ವಾಪಸು ಕೊಡುವುದು ಕಾರ್ಯಸಾಧ್ಯವಲ್ಲದಿದ್ದಲ್ಲಿ. ಅಂಥ ಭೂಮಿಯು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗಿದ್ದಯೆಂದು ಭಾವಿಸತಕ್ಕದು. ಸರ್ಕಾರವು ಅಂಥ ಭೂಮಿಯನ್ನು, ಭೂಮಿಯನ್ನು ಮಂಜೂರು ಮಾಡುವುದಕ್ಕೆ ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಯಾವೊಬ್ಬ ವ್ಯಕ್ತಿಗೆ ಮಂಜೂರು ಮಾಡಬಹುದು.

(2) 5ಎ ಪ್ರಕರಣದ ಅಡಿಯಲ್ಲಿ ಡೆಪ್ಯುಟಿ ಕಮಿಷನರು ಹೊರಡಿಸಿದ ಆದೇಶಗಳಿಗೊಳಪಟ್ಟು (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಆದೇಶವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಅಸಿಸ್ಟೆಂಟ್ ಕಮಿಷನರು ಕೈಗೊಂಡ ಅಥವಾ ಕೈಗೊಳ್ಳಲಿರುವ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವೂ ನಿರ್ಬಂಧಕಾಜ್ಞೆಯನ್ನು ನೀಡತಕ್ಕುದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ, ಮಂಜೂರಾದ ಯಾವುದೇ ಭೂಮಿಯು, ಮೊದಲು ಭೂಮಿಯನ್ನು ಪಡೆದವನಲ್ಲದ ಅಥವಾ ಅವನ ಕಾನೂನು ಸಮ್ಮತ ವಾರಸುದಾರನಲ್ಲದ ಒಬ್ಬ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ, ಆದಕ್ಕೆ ವಿರುದ್ಧವಾದುದು ರುಜುವಾತಾಗುವವರೆಗೆ ಅವನು, 4ನೇ

ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಕೃತ ಮತ್ತು ಶೂನ್ಯವಾಗಿರುವ ವರ್ಗಾವಣೆಯ ಮೂಲಕ ಭೂಮಿಯನ್ನು ಆರ್ಜಿಸಿದ್ದಾನೆಂದು ಪೂರ್ವಭಾವನೆ ಮಾಡತಕ್ಕುದು.

"5ಎ. ಡೆಪ್ಯುಟಿ ಕಮಿಷನರಿಗೆ ಅಪೀಲು : (1) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ಅಧಿನಿಯಮ, 1984ರ ಪ್ರಾರಂಭದ ತರುವಾಯ, 5ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಅಡಿಯಲ್ಲಿ ಭೂಮಿಯ ಸ್ವಾಧೀನತೆಯನ್ನು ತೆಗೆದುಕೊಳ್ಳಲು ಅಥವಾ ಸದರಿ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಭೂಮಿಯನ್ನು ವಾಪಸು ಕೊಡಲು ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶವು ತನಗೆ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ, ಅಧಿಕಾರ ವ್ಯಾಪ್ತಿಯುಳ್ಳ ಡೆಪ್ಯುಟಿ ಕಮಿಷನರಿಗೆ ಅಪೀಲು ಹೂಡಬಹುದು;

ಪರಂತು, ಡೆಪ್ಯುಟಿ ಕಮಿಷನರು, (1)ನೇ ಉಪ-ಪ್ರಕರಮದಲ್ಲಿ ಉಲ್ಲೇಖಿಸಲಾದ ಅವಧಿಯ ತರುವಾಯ ಅಂಥ ಆದೇಶದ ವಿರುದ್ಧ ಹೂಡಲಾದ ಅಪೀಲನ್ನು, ಆ ಅವಧಿಯೊಳಗೆ ಅಪೀಲನ್ನು ಹೂಡದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿದ್ದುವೆಂದು ತನಗೆ ಮನದಟ್ಟಾದರೆ, ಅದನ್ನು ಅಂಗೀಕರಿಸಬಹುದು :

ಮತ್ತು ಪರಂತು, ಡೆಪ್ಯುಟಿ ಕಮಿಷನರು, ಅಂಥ ಪ್ರಾರಂಭದ ದಿನಾಂಕಕ್ಕೆ ಮುಂಚೆ ಅಸಿಸ್ಟೆಂಟ್ ಕಮಿಷನರು ಹೊರಡಿಸಿದ ಆದೇಶದ ವಿರುದ್ಧದ ಅಪೀಲನ್ನು, ಸದರಿ ದಿನಾಂಕದಂದು, ಅಂಥ ಆದೇಶದ ವಿರುದ್ಧ ಹೂಡಲಾದ ರಿಟ್ ಅರ್ಜಿ ಅಥವಾ ಅಂಥ ರಿಟ್ ಅರ್ಜಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಹೂಡಲಾದ ಅಪೀಲು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇದ್ದರೆ, ಅಂಗೀಕರಿಸಬಹುದು.

(2) ಡೆಪ್ಯುಟಿ ಕಮಿಷನರು ಅಪೀಲನ್ನು ನಿಯಮಿಸಲಾದ ರೀತಿಯಲ್ಲಿ ಇತ್ಯರ್ಥಗೊಳಿಸತಕ್ಕುದು ಮತ್ತು ಅವರು ಹೊರಡಿಸಲಾದ ಆದೇಶವು ಅಂತಿಮವಾಗಿರತಕ್ಕುದು.

* * *